ಶ್ರೀ ರಾಮಕೃಷ್ಣ ಹೆಗಡೆ.—ಸ್ಪಾಟಿಕ್ ಎಕ್ಸ್‌ಟೇಂಜ್‌ನೊಳಗೆ ಏರಿಕೆ ಇಳುವರಿ ಸಾಮಾನ್ಯವಾಗಿ ಆಗುತ್ತಲೇ ಇರುತ್ತದೆ. ಅಷ್ಟುಮಾತ್ರಕ್ಕೇ ಮಾನ್ಯ ಸದಸ್ಯರು ಆ ರೀತಿ ಭಾವನೆ ಮಾಡಿದರೆ ತಪ್ಪಾಗುತ್ತದೆ.

ಶ್ರೀ ಎನ್. ಎ. ಚನ್ನೇಗೌಡ.—ಈ ಕಾರ್ಖಾನೆ ಇಷ್ಟು ನಷ್ಟ ಹೊಂದಲು ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಸುಮಾರು ಎರಡು ವರ್ಷಗಳಿಂದಲೂ ಈ ಕಾರ್ಖಾನೆ ಲಾಭ ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಕಾರಣಗಳನ್ನು ಹೇಳಿದ್ದೇನೆ. ಯಾವ ಕಾರ್ಖಾನೆಯಲ್ಲಿ ಲಾಭವಾಗುತ್ತಾ ಇಲ್ಲವೋ ಅಲ್ಲಿ ಅದರ ಷೇರು ಬೆಲೆ ಕಡಿಮೆಯಾಗುತ್ತದೆ.

ಶ್ರೀ ಎನ್. ಎ. ಚನ್ನೇಗೌಡ.—ಇದಕ್ಕೆ ಕಾರಣ ಸರ್ಕಾರದ ಆಡಳಿತದಲ್ಲಿನ ಅವಕ್ಷತೆ ಅಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಮಾನ್ಯ ಸದಸ್ಯರ ಅಭಿಪ್ರಾಯ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈ ಕಾರ್ಖಾನೆಯಲ್ಲಿ ಎಷ್ಟು ನಷ್ಟವಾಗಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರವಾಗಿ ಮುತ್ತೊಂದು ಪ್ರಶ್ನೆಯನ್ನು ಹಾಕಿದರೆ ನಾನು ಉತ್ತರ ಕೊಡುತ್ತೇನೆ. I am sorry, Sir. I am able to give the hon'ble member the information he has asked for.

Year	*No. of days of crushing*	*Cane crushed*	*Gross profit*
1963–64	155	2,01,000 tonnes	Rs. 34.64 lakhs
1964–65	278	3,76,000 tonnes	16.46 ,,
1965–66	234	... ...	13.56 ,,
1966–67	...	... ...	4.84 ,,

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಿಬ್ಬಂದಿ ಖರ್ಚನ್ನು ಕಡಿಮೆ ಮಾಡುವುದಕ್ಕೆ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆಂದು ಹೇಳಿದ್ದಾರೆ, ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ? ಅದರಿಂದ ಎಷ್ಟು ಖರ್ಚು ಕಡಿಮೆಯಾಗುವುದಕ್ಕೆ ಸಾಧ್ಯವಾಗಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ಎಷ್ಟೋ ಜನಗಳನ್ನು ಕಡಿಮೆ ಮಾಡಿದ್ದೇವೆ. ಅದಕ್ಕೆ ಹೆಚ್ಚು ವಿವರಗಳಿವೆ. ಅದು ಮಾನ್ಯ ಸದಸ್ಯರಿಗೆ ಬೇಕಾದರೆ ಕೊಡುತ್ತೇನೆ.

Construction of Bridge Across River Chikkakundur Hole

18. Sri K. P. CHIKKe GOWDA (Sakleshpur).—

Will the Minister for Public Works be pleased to state :—

(*a*) the actual spot where the bridge across the River Chikkakundur hole in Yesalur Hobli in Sakaleshpur Taluk is to be constructed ;

(*b*) whether the blue print and the estimate are ready ;

(*c*) if so, the estimated cost ?

A.—Sri VEERENDRA PATIL (Minister for Public Works).—

(*a*) Not decided.

(*b*) No.

(*c*) Does not arise in view of reply to clause (*b*) above.

ಶ್ರೀ ಕೆ. ಪಿ. ಚಿಕ್ಕೇಗೌಡ.—ನ್ಯಾಯ, ನನ್ನ ಪ್ರಶ್ನೆಗೆ ಉತ್ತರವಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ, ಸುಮಾರು 5-6 ವರ್ಷಗಳ ಹಿಂದೆಯೆ ಆ ಸೇತುವೆಯು ಎಸ್ಟಿಮೇಟು ಮಂಜೂರಾಗಿ ಅದನ್ನು ಕಟ್ಟತಕ್ಕ ವಿಷಯದಲ್ಲಿ ಸ್ಥಳದ ವ್ಯವಹಾರದಿಂದ ಅದು ನಿಂತುಹೋಗಿದೆ ಎಂಬುದು ತಮಗೆ ಗೊತ್ತಿದೆಯೇ ?

† ಶ್ರೀ ವೀರೇಂದ್ರ ಪಾಟೀಲ್.—ನನಗೆ ಗೊತ್ತಿರುವ ಹಾಗೆ ಆ ಸೇತುವೆಯು ಎಸ್ಟಿಮೇಟು ತಯಾರಾಗಿಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಆ ಸೇತುವೆಯ ಬಗ್ಗೆ ಸರ್ಕಾರದವರು ಏನು ಯೋಚನೆ ಮಾಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿಯವರೆಗೂ ಸರ್ಕಾರದವರು ಆ ಸೇತುವೆಯನ್ನು ಕಟ್ಟಬೇಕೆಂದು ವಿಚಾರ ಮಾಡಿಲ್ಲ.

Removal of Stones from the Quarry

19. Sri N. G. HALAPPA (Channagiri).—

Will the Minister for Public Works be pleased to state :—

(*a*) whether any progress has been made to obtain information in respect of the quarry from which the Stones were removed since their replies to starred Question No. 377 during First Session 1967 ;

(*b*) if so, the quarry from which the Stones were removed ?

A.—Sri VEERENDRA PATIL (Minister for Public Works).—

(*a*) There is no record available to show the quarry from which the stones were brought.

(*b*) Does not arise in view of reply to clause (*a*) above.

ಶ್ರೀ ಎನ್. ಜಿ. ಹಾಲಪ್ಪ.—ಒಂದು ವರ್ಷವಾದರೂ ಕೂಡ ಕಲ್ಲುಗಳನ್ನು ಯಾವ ಕಲ್ಲಿನ ಗಣಿಯಿಂದ ತರಲಾಯಿತು ಎಂಬುದನ್ನು ನೂಚಿಸುವ ಬಗ್ಗೆ ಯಾವ ದಾಖಲೆಯೂ ದೊರೆಯುವಂತಿಲ್ಲ ಎಂದು ಹೇಳಿದ್ದೀರಿ. ಈ ಸರ್ಕಾರದ ರೀತಿ ನೀತಿಯಲ್ಲಿ ಇದಕ್ಕೆ ಏನಾದರೂ ಒಂದು ಇಲಾಖೆ ಇದೆಯೇ ಹೇಗೆ ? ಇದೇನಾದರೂ ಒಂದು ಪ್ರೈವೇಟ್ ಪ್ರಾಪರ್ಟಿ ಎಂದೇನಾದರೂ ತಿಳಿದುಕೊಂಡು ಈ ರೀತಿ ಮಾಡುತ್ತಿದ್ದಾರೆಯೇ ಹೇಗೆ ?

† ಶ್ರೀ ವೀರೇಂದ್ರ ಪಾಟೀಲ್.—ಆ ಕೆಲಸವನ್ನು ಕಂಟ್ರಾಕ್ಟರಿಗೆ ವಹಿಸಲಾಗಿದೆ. ಅದನ್ನು ಅವರಿಗೆ ವಹಿಸಿದಾಗ ಒಂದು ರೇಟು ಕೊಟ್ಟಿದೆ. 3-4 ಮೈಲಿ ಒಳಗೇ ಇರುವ ಕ್ವಾರಿಯಿಂದ ಕಲ್ಲನ್ನು ತಂದು ಕೆಲಸಮಾಡಬೇಕೆಂದು ಲೀಡ್ ಮತ್ತು ಲಿಫ್ಟ್ ಎಲ್ಲಾ ಅವರಿಗೇ ಒಪ್ಪಿಸಿದ್ದೇವೆ. ಅವರು ಎಲ್ಲಿಂದ ಕಲ್ಲನ್ನು ತಂದರು ಎನ್ನುವ ರೆಕಾರ್ಡು ಸಿಕ್ಕುವುದು ಕಷ್ಟವಾಗಿದೆ.

ಶ್ರೀ ಎಂ. ನಾಗಪ್ಪ.—ಎಷ್ಟು ಮೈಲಿ ದೂರದ ಕ್ವಾರಿಯಿಂದ ಕಲ್ಲನ್ನು ತೆಗೆದುಕೊಂಡು ಬಂದಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಥ್ರೂ ರೇಟ್ ಕೊಟ್ಟಿರುವುದರಿಂದ 3-4 ಮೈಲಿ ಒಳಗೆ ಇರುವ ಕ್ವಾರಿಯಿಂದ ಕಲ್ಲನ್ನು ತಂದು ಹಾಕಿದ್ದಾರೆ.

ಶ್ರೀ ಎಂ. ನಾಗಪ್ಪ.—5 ಮೈಲಿ ಕ್ವಾರಿಯಿಂದ ಕಲ್ಲನ್ನು ತೆಗೆದುಕೊಂಡು ಬಂದಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?